158ನೇ ಚು ಉ SL NO:-08 09/03/26

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪಿ.ಹೆಚ್. ಪೂಜಾರ, ಇವರು ಮಂಡಿಸಿರುವ ಶೂನ್ಯವೇಳೆ ಪ್ರಸ್ತಾಪಕ್ಕೆ ಉತ್ತರ**

**ಪ್ರಸ್ತಾಪ:-**

"ಅಂತರ್ಜಲ ಸಂಪೂರ್ಣ ಕಲುಷಿತ ಕೊಳಚೆ ಗುಂಡಿಯಂತಾದ ಕೆರೆ ಕಣ್ಮುಚ್ಚಿ ಕುಳಿತ ನಗರಸಭೆ ಮಹಾರಾಜ ಕಾಲನಿಗೆ ಜಲಕಂಟಕ" ಎಂಬ ವಿಶೇಷ ಶಿರ್ಷಿಕೆಯು ದಿನಾಂಕ: 09-03-2026 ರಂದು ಕನ್ನಡ ದಿನಪತ್ರಿಕೆಯಲ್ಲಿ ಪ್ರಕಟಣೆಗೊಂಡಿರುವ ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಕೋರುತ್ತೇನೆ.

ಬಾಗಲಕೋಟೆ ಜಿಲ್ಲೆಯಲ್ಲಿನ ಘಟಪ್ರಭಾ ನದಿ ತಟದ ಐತಿಹಾಸಿಕ ನಗರ ಮುಧೋಳದ ನಾಗರಿಕರು ಈಗ ನೀರಿನ ದೋಷದಿಂದಾಗಿ ಜೀವ ಕೈಯಲ್ಲಿ ಹಿಡಿದುಕೊಂಡು ಬದುಕುವಂತಾಗಿದ್ದು, ಇಲ್ಲಿನ ಜನರು ನಿತ್ಯವು ಕಲುಷಿತ ನೀರು ಕುಡಿಯುವುದರಿಂದಾಗಿ ಅನಾರೋಗ್ಯಕ್ಕೆ ತುತ್ತಾಗುವಂತೆ ಮಾಡಿದೆ. ನಗರದ ಮಹಾರಾಜ ಕಾಲನಿ ಭಾಗದಲ್ಲಿ ಅಂತರ್ಜಲ ಸಂಪೂರ್ಣ ವಿಷವಾಗಿ ಮಾರ್ಪಟ್ಟಿದ್ದು, ಪ್ರತಿ ಮನೆಯ ನಲ್ಲಿಯನ್ನು ತಿರುಗಿಸಿದರೆ ಸಾಕು, ಕಲುಷಿತ ನೀರು, ಕೆಟ್ಟ ನೀರು, ಬುರುಗು ಸಹಿತ ಮತ್ತು ದುರ್ವಾಸನೆಯಿಂದ ತುಂಬಿದ ಮಿಶ್ರಿತ ನೀರು ಬರುತ್ತಿದೆ. ಈ ನೀರನ್ನು ಬಳಸುತ್ತಿರುವ ಸ್ಥಳೀಯ ನಾಗರಿಕರು ಸಾಂಕ್ರಾಮಿಕ ರೋಗದ ಭೀತಿಯಿಂದ ಬಳಲುತ್ತಿರುವುದು ಅತ್ಯಂತ ನೋವು ತರುವ ಸಂಗತಿ.

ಈ ಭಾಗದ ಜನರಿಗೆ ಜಲಮೂಲವಾಗಿದ್ದ ಮತ್ತು ಅಂತರ್ಜಲ ವೃದ್ಧಿಗೆ ಕಾರಣವಾಗಿದ್ದ ಐತಿಹಾಸಿಕ ಮಹಾರಾಜ ಕಾಲನಿ ಕೆರೆ ಇಂದು ಕಣ್ಮುಚ್ಚಿ ಕುಳಿತಿರುವ ನಗರಸಭೆಯ ನಿರ್ಲಕ್ಷ್ಯದ ಪರಾಕಾಷ್ಠೆಯಿಂದ ಅಕ್ಷರಶ: ಕೊಳಚೆ ಗುಂಡಿಯಾಗಿ ಪರಿಣಮಿಸಿದೆ. ಸುತ್ತಮುತ್ತಲಿನ ಕಲುಷಿತ ಚರಂಡಿ ನೀರೆಲ್ಲವೂ ಅವ್ಯಾಹಕವಾಗಿ ಈ ಕೆರೆಗೆ ಸೇರುತ್ತಿರುವುದರಿಂದ, ಕೆರೆಯ ನೀರು ಸಂಪೂರ್ಣ ಕಲುಷಿತಗೊಂಡಿದೆ. ಈ ವಿಷಪೂರಿತ ನೀರು ನಿಂತು ನಿಂತು ಮಲಿನ ನೀರು ಸಂಗ್ರಹವಾಗಿ, ಅಲ್ಲಿನ ಸುತ್ತಮುತ್ತ ಅಸಹನೀಯ ವಾಸನೆ ಹರಡುತ್ತಿದೆ. ಅಷ್ಟೇ ಅಲ್ಲದೇ ಈ ಕಲುಷಿತ ನೀರು ಅಲ್ಲೇ ಇಂಗುವುದರಿಂದ ಬೋರವೆಲ್‌ಗಳಲ್ಲಿ ಇದರ ಪರಿಣಾಮ ಬೀರುತ್ತಿದೆ. ಈ ಕಲುಷಿತ ನೀರಿನ ಸಮಸ್ಯೆಗಳಿಂದ ವಯೋವೃದ್ಧರು, ಚಿಕ್ಕ ಮಕ್ಕಳು ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ. ದಿನನಿತ್ಯ ಸ್ನಾನಕ್ಕೂ ಬಳಸಲಾಗದಂತಹ ಸ್ಥಿತಿ ಬಂದು ನಿಂತಿದೆ ಎಂದು ವರದಿಯಾಗಿದೆ.

ಒಟ್ಟಾರೆ ಹೇಳುವುದಾದರೆ ಈ ಭಾಗದ ಜನರಿಗೆ ಕಲುಷಿತ ನೀರಿನಿಂದಾಗುವ ಎಲ್ಲಾ ಸಮಸ್ಯೆಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ, ನಿರ್ಲಕ್ಷ್ಯ ವಹಿಸುತ್ತಿರುವ ನಗರಸಭೆ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳುವ ಮೂಲಕ, ಕಲುಷಿತ ನೀರಿನ ಬಳಕೆಯಿಂದ ಬಳಲುತ್ತಿರುವ ನಾಗರಿಕರಿಗೆ ನ್ಯಾಯ ಒದಗಿಸಬೇಕೆಂದು ಈ ಮೂಲಕ ಸರ್ಕಾರಕ್ಕೆ ಒತ್ತಾಯಿಸುತ್ತೇನೆ.

**ಉತ್ತರ:-**

ಬಾಗಲಕೋಟೆ ಜಿಲ್ಲೆಯ ಮುಧೋಳ ನಗರಸಭೆ ವ್ಯಾಪ್ತಿಯಲ್ಲಿನ ಬಳಕೆ ಮಾಡಿದ ಕಲುಷಿತ ನೀರು ಮಹಾರಾಜ ಕಾಲೋನಿಯ ಪಕ್ಕದಲ್ಲಿರುವ ರಾಣಿ ಕೆರೆಯ ಬಳಿ ಹಾಯ್ದು, ಘಟಪ್ರಭಾ ನದಿಗೆ ಸೇರುತ್ತಿರುವುದು ಗಮನಕ್ಕೆ ಬಂದ ತಕ್ಷಣ ಮುಧೋಳ ನಗರಸಭೆ ವತಿಯಿಂದ ಸದರಿ ಬಳಕೆ ಮಾಡಿದ ನೀರನ್ನು ತಡೆಹಿಡಿದು, ಯಂತ್ರಗಳ ಮೂಲಕ ಒಳಚರಂಡಿಗೆ ಲಿಂಕ್ ಮಾಡಿ, ಮಲಿನ ನೀರು ಶುದ್ಧೀಕರಣ ಘಟಕಕ್ಕೆ (ಎಸ್.ಟಿ.ಪಿ.) ಸೇರುವಂತೆ ಅವಕಾಶ ಕಲ್ಪಿಸಲಾಗಿದೆ ಹಾಗೂ ಸದರಿ ಬಳಕೆ ಮಾಡಿದ ಕಲುಷಿತ ನೀರು ನದಿಗೆ ಸೇರುವುದನ್ನು ಸಂಪೂರ್ಣವಾಗಿ ನಿಲ್ಲಿಸಲಾಗಿದೆ.

ರಾಣಿ ಕೆರೆಯ ಪಕ್ಕದಲ್ಲಿ ಸಂಗ್ರಹವಾಗಿದ್ದ ಬಳಕೆ ಮಾಡಿದ ಕಲುಷಿತ ನೀರು ಸರಾಗವಾಗಿ ಹರಿದು ಹೋಗಲು ಖಾಸಗಿಯವರ ಮಾಲ್ಕಿ ಜಾಗದಲ್ಲಿ ದೊಡ್ಡ ಗಾತ್ರದ ಸಿಮೆಂಟ್ ಪೈಪ್‌ಗಳನ್ನು ಅಳವಡಿಸಿ, ನೇರವಾಗಿ ಮಲಿನ ನೀರು ಶುದ್ಧೀಕರಣ ಘಟಕಕ್ಕೆ (ಎಸ್.ಟಿ.ಪಿ.) ಸೇರುವಂತೆ ತುರ್ತು ಕ್ರಮ ಕೈಗೊಳ್ಳಲು ಈಗಾಗಲೇ ಒಂದು ವಾರದ ಹಿಂದೆ ಮುಧೋಳ ನಗರಸಭೆ ವತಿಯಿಂದ ಕಾಮಗಾರಿಯನ್ನು ಪ್ರಾರಂಭಿಸಲಾಗಿದ್ದು, ಪ್ರಸ್ತುತ ಪ್ರಗತಿಯಲ್ಲಿರುತ್ತದೆ. ಸದರಿ ಕಾಮಗಾರಿಯನ್ನು ಮುಂದಿನ 15 ದಿನಗಳೊಳಗಾಗಿ ಪೂರ್ಣಗೊಳಿಸಲಾಗುವುದು.

ಮುಂದುವರೆದು, ಸ್ವಚ್ಛಭಾರತ್ ಮಿಷನ್ (ನಗರ)) - 2.0 ಯೋಜನೆಯಡಿಯ ಜಲಶಕ್ತಿ ಅಭಿಯಾನದಡಿಯಲ್ಲಿ ರಾಜ್ಯದ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುತ್ತಿರುವ ಬಳಸಿದ ನೀರು ನಿರ್ವಹಣೆಗಾಗಿ ಸರ್ಕಾರದ ಆದೇಶ ಸಂಖ್ಯೆ: UDD 5 CSS 2023, ದಿನಾಂಕ 19.07.2023 ರಂತೆ ಕೆ.ಯು.ಐ.ಡಿ.ಎಫ್ .ಸಿ. ಸಂಸ್ಥೆಯನ್ನು ನೋಡಲ್ ಏಜೆನ್ಸಿಯಾಗಿ ನೇಮಿಸಲಾಗಿದ್ದು, ತ್ಯಾಜ್ಯ ನೀರು ಸಂಸ್ಕರಣೆಗಾಗಿ SBM(U)- 2.0 ಉಪಘಟಕವಾದ STP, UGD, HSC ಹಾಗೂ Missing Links ನಿರ್ಮಾಣವನ್ನು ಕೆ.ಯು.ಐ.ಡಿ.ಎಫ್.ಸಿ. ವತಿಯಿಂದ ಕೈಗೊಳ್ಳಲಾಗುತ್ತಿದೆ.

SBM(U)-2.0 Used Water Management ರಡಿಯಲ್ಲಿ ಉಳಿದ 3 ಉಪ ಘಟಕಗಳಾದ Interception & Diversion, Procurement of Sewer Cleaning Vehicles and Procurement Cesspool Vehicles ಕಾಮಗಾರಿಗಳನ್ನು ರಾಜ್ಯ ಅಭಿಯಾನ ನಿರ್ದೇಶಕರು, SBM(U)-ಪೌರಾಡಳಿತ ನಿರ್ದೇಶನಾಲಯ ಇವರ ವತಿಯಿಂದ ಕೈಗೊಳ್ಳಲಾಗುತ್ತಿದೆ.

Interception & Diversion ಕಾಮಗಾರಿಗೆ ಸಂಬಂಧಿಸಿದಂತೆ, ಬಾಗಲಕೋಟೆ ಜಿಲ್ಲೆಯ ಮುಧೋಳ ಪುರಸಭೆಗೆ ರೂ.953.00 ಲಕ್ಷಗಳ ವಿಸ್ತೃತ ಯೋಜನಾ ವರದಿಗೆ (Capex 927.00 ಲಕ್ಷಗಳು Opex 26.00 ಲಕ್ಷಗಳು) ಸರ್ಕಾರದ ಆದೇಶ ಸಂಖ್ಯೆ: ನಅಇ 229 ಸಿಎಸ್ಎಸ್ 2021, ದಿನಾಂಕ: 22.01.2026 ರಲ್ಲಿ ಅನುಮೋದನೆ ನೀಡಲಾಗಿದ್ದು, ಸದರಿ ಯೋಜನೆಯ ಟೆಂಡರ್ ಪ್ರಕ್ರಿಯೆ ಪ್ರಾರಂಭಿಕ ಹಂತದಲ್ಲಿರುತ್ತದೆ.

Procurement of Sewer Cleaning Machines ಗೆ ಸಂಬಂಧಿಸಿದಂತೆ, ಬಾಗಲಕೋಟೆ ಜಿಲ್ಲೆಯ ಮುಧೋಳ ಪುರಸಭೆಗೆ ರೂ.35.00 ಲಕ್ಷಗಳ ವೆಚ್ಚದಲ್ಲಿ, 01 ಸಂಖ್ಯೆ, 4000 Litre ಸಾಮರ್ಥ್ಯದ Sewer Cleaning Machines ವಾಹನದ ಖರೀದಿಗಾಗಿ ಸರ್ಕಾರದ ಆದೇಶ ಸಂಖ್ಯೆ: ನಅಇ 229 ಸಿಎಸ್ಎಸ್ 2021, ದಿನಾಂಕ: 30-12-2024 ರಲ್ಲಿ ಅನುಮೋದನೆ ನೀಡಲಾಗಿದ್ದು, ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.

**ಸಂಖ್ಯೆ: ನಅಇ 82 ಜಿಇಎಲ್ 2026 (ಇ)**

(ರಹೀಂ ಖಾನ್)
**ಪೌರಾಡಳಿತ ಮತ್ತು ಹಜ್ ಸಚಿವರು**